CW-05
PW-05

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 280/2023

ದಿ. 01-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-05
ಫ್ರಾಸಾ-05

| | |
|---|---|
| ಸಾಕ್ಷಿದಾರರ ಹೆಸರು | ಫಕೀರಯ್ಯ |
| ತಂದೆಯ ಹೆಸರು | ಅಮರೇಶ |
| ವಯಸ್ಸು | 30 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ರಬ್ಬನಕಲ್ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ಚಾಸಾ-1 ರಿಂದ 4, 6 ಮತ್ತು 7 ರವರು ನನ್ನ ಸಂಬಂಧಿಕರು. ನಾವು ಪರಿಶಿಷ್ಟ ಪಂಗಡದ ಬೇಡರ ಜಾತಿಗೆ ಸೇರಿದವರು. ಆರೋಪಿತರು ಕಬ್ಬೇರು ಜಾತಿಗೆ ಸೇರಿದವರು. ನಮಗೂ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ. ಆರೋಪಿತರು ಚಾಸಾ-1 ರಿಂದ 3 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಜೀವದ ಬೆದರಿಕೆ ಹಾಕಿಲ್ಲ. ಕೈಗಳಿಂದ, ಕಟ್ಟಿಗೆಗಳಿಂದ, ಚಪ್ಪಲಿಯಿಂದ ಹೊಡೆದಿಲ್ಲ, ಮತ್ತು ಚಾಸಾ-3 ರವರ ಮಾನಕ್ಕೆ ಕುಂದು ಉಂಟು ಮಾಡಿಲ್ಲ. ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಆರೋಪಿತರು

CW-05
PW-05

ಜಾತಿನಿಂದನೆ ಮಾಡಿ ಬೈದಿರುವುದಿಲ್ಲ. ನಾನು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ಜಗಳ ಬಿಡಿಸಿಕೊಂಡಿರುವುದಿಲ್ಲ. ಈ ಸಂಬಂಧ ನಾನು ಪೊಲೀಸಿನವರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ**

2. ದಿಃ 10-12-2022 ರಂದು, ರಬ್ಬನಕಲ್ ಗ್ರಾಮದ ರಾಮಕ್ಕಮ್ಮ ದೇವಸ್ಥಾನದ ದುಡ್ಡನ್ನು ಲೆಕ್ಕ ಪತ್ರ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನಾವು ಮತ್ತು ಆರೋಪಿತರು ದೇವಸ್ಥಾನದ ಹತ್ತಿರ ಸೇರಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಳೆಯು ಬರುತ್ತಿರುವುದರಿಂದ ದೇವಸ್ಥಾನದ ಸುತ್ತಮುತ್ತಲೂ ಕೇಸರಾಗಿದ್ದರಿಂದ ನಾವು ಮತ್ತು ಆರೋಪಿತರು ಮತ್ತು ಊರಿನ ಜನರು ದೇವಸ್ಥಾನದ ದುಡ್ಡಿನ ಲೆಕ್ಕಪತ್ರ ಮಾಡಲು ದಿಃ 11-12-2022 ರಂದು ಪುನಃ ಚಾಸಾ-2 ರವರ ಮನೆಯ ಅಂಗಳದಲ್ಲಿ ಸೇರಿದ್ದೆವು ಎಂದರೆ ಸರಿಯಲ್ಲ. ಬೆಳಿಗ್ಗೆ 10-30 ರ ಸಮಯದಲ್ಲಿ ಆರೋಪಿತರು ದೇವಸ್ಥಾನದ ಲೆಕ್ಕಪತ್ರ ಮಾಡಲು ನೀವೇಕೆ ಇಲ್ಲಿ ಬಂದಿರುತ್ತೀರಿ ಸೂಳೆಮಕ್ಕಳೇ ಎಂದು ನಮ್ಮೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ, ಆಗ 1 ನೇ ಆರೋಪಿ ಚಾಸಾ-2 ತಲೆಗೆ ರಾಡಿನಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 2 ನೇ

CW-05
PW-05

ಆರೋಪಿ ಚಾಸಾ-2 ಕಟ್ಟಿಗೆಯಿಂದ ಹೊಟ್ಟೆಗೆ ಕೈ ಕಾಲಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ, 1 ನೇ ಆರೋಪಿ ಚಾಸಾ-3 ರವರಿಗೆ ಸೀರೆ ಹಿಡಿದು ಎಳೆದಾಡಿ ಬ್ಯಾಡರ ಸೂಳೆ ಎಂದು ಜಾತಿನಿಂದನೆ ಮಾಡಿ ಕಂಬ್ಬಕ್ಕೆ ಕಟ್ಟಿ ಹಾಕಿ ಹೊಡೆಯಿರಿ ಎಂದು ಪ್ರಚೋದಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-3 ರವರಿಗೆ 2 ನೇ ಆರೋಪಿ ಎದೆಗೆ ಒದ್ದು, ಕುಪ್ಪಸವನ್ನು ಹಿಡಿದು ಎಳೆದಾಡಿ ಮಾನಕ್ಕೆ ಕುಂದು ಉಂಟು ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ಚಾಸಾ-3 ರವರಿಗೆ ಮತ್ತು ಚಾಸಾ-2 ರವರ ಕುತ್ತಿಗೆಯ ಮೇಲೆ ಕಾಲಿಟ್ಟು ಹೊಡೆದಿರುತ್ತಾರೆಂದರೆ ಸರಿಯಲ್ಲ. ಬಿಡಿಸಲು ಹೋದ ಚಾಸಾ-1 ರವರಿಗೆ ಆರೋಪಿ ನಂ.2 ಕಟ್ಟಿಗೆಯಿಂದ ತಲೆಗೆ ಮತ್ತು ಮುಖಕ್ಕೆ ಹೊಡೆದಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಬ್ಯಾಡರ ಸೂಳೆಮಗನೇ ಬಿಡಿಸಲು ಬಂದಾನ ಎಂದು ಜಾತಿನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಕೈ ಮತ್ತು ಕಾಲುಗಳಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಚಾಸಾ-3 ರವರಿಗೆ ಎಡಗಾಲಿನ ಚಪ್ಪಲಿಂದ ಚಪ್ಪಲಿಗೆ ಬುಜಕ್ಕೆ ಹೊಡೆದಿರುತ್ತಾನೆ ಮತ್ತು ಆಕೆಯ ಕೂದಲು ಹಿಡಿದು ಎಳೆದಾಡಿರುತ್ತಾನೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ಚಾಸಾ-1 ರಿಂದ 3 ಜೀವಸಹಿತ ಬಿಡುವುದಿಲ್ಲ ಕೊಂದು ಹಾಕುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ಈ ಜಗಳವನ್ನು ನಾನು ಮತ್ತು ಚಾಸಾ-4, 6 ಮತ್ತು 7 ಪ್ರತ್ಯಕ್ಷವಾಗಿ ನೋಡಿ ಬಿಡಿಸಿರುತ್ತೇವೆಂದರೆ ಸರಿಯಲ್ಲ. ಈ ಸಂಬಂಧ ನಾನು ಪೊಲೀಸಿನವರಿಗೆ ಹೇಳಿಕೆಯನ್ನು ನೀಡಿದ್ದರೂ ಸಹಿ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯ

CW-05
PW-05

ಹೇಳಿಕೆಯನ್ನು ಅಭಿಯೋಜನೆಯ ಪರವಾಗಿ ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಆರ್.ಪಿ.ಎನ್. ವಕೀಲರಿಂದ ಆರೋಪಿ ಪರಃ**

ಏನೂ ಇಲ್ಲ ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.